ಧೈರ್ಯವಿರಲಿಲ್ಲ. ಮಲಕಾಣಿಯ ಅಣ್ಣನ ಮಗಳನ್ನು ತಬ್ಬಿಕೊಂಡಿದ್ದೇ ಎಡವಟ್ಟಾಗಿ ವಾಸಪ್ಪ ಕುಲಕರ್ಣಿ ಐದು ಲಕ್ಷ ರೂಪಾಯಿಗಳ ದಂಡ ತೆತ್ತಿದ್ದ. ಹದಿಮೂರರ ವಯಸ್ಸಿನ ಕಲಾವತಿ ಅದ್ಯಾವ ಘಳಿಗೆಯಲ್ಲಿ ಅರವತ್ತರ ಮುದುಕ ವಾಸಪ್ಪನ ಕಾಮವನ್ನು ಕೆರಳಿಸಿದಳೋ, ವೇಳೆಯಲ್ಲದ ವೇಳೆಯಲ್ಲಿ ಅಲ್ಲಿ ಶಿವಣ್ಣನ ಮನೆಗೆ ಹೋಗಿ ಹರೆಯದ ಪೋರಿಯನ್ನು ತಬ್ಬಿ ಹಿಡಿದು, ಎದೆಯ ಮೇಲೆ ಕೈಯಾಡಿಸಿದ್ದ. ಆಗಷ್ಟೇ ಕಲಾವತಿ ಮೈನೆರೆದು ಎಂಟು ದಿನಗಳಾಗಿತ್ತು. ಆಗಾಗ ಕೈಹಿಡಿದು ಮುದ್ದಿಸುತ್ತಿದ್ದನಾದರೂ ಅಜ್ಜನ ಪ್ರೀತಿ ಎಂದು ಮನೆಯವರೂ ತಲೆ ಕೆಡಿಸಿಕೊಂಡಿರಲಿಲ್ಲ. ಪೋರಿ ಮೈನೆರೆಯುವುದನ್ನೇ ಕಾಯುತ್ತಿದ್ದ ಮುದುಕ ಮೊಮ್ಮಗಳ ವಯಸ್ಸಿನವಳೆಂದು ನೋಡದೆ ತಬ್ಬಿಕೊಂಡು ಅವಳೆದುರು ಬೆತ್ತಲಾಗಿದ್ದ. ಮುದುಕನ ವಿಶ್ವರೂಪಕ್ಕೆ ಹೆದರಿ ಕಿಟಾರನೆ ಕಿರುಚಿದ ಕಲಾವತಿ ಒಂದೇ ಹೆಜ್ಜೆಗೆ ಕೋಣೆಯಿಂದ ಹೊರಗೆ ಜಿಗಿದಿದ್ದಳು. ಶಿವಣ್ಣನ ಅವ್ವ ಮತ್ತು ಹೆಂಡತಿ ಕೋಣೆ ಹೊಕ್ಕು ಚಪ್ಪಲಿಯಿಂದ ವಾಸಪ್ಪನಿಗೆ ತಕ್ಕಶಾಸ್ತಿ ಮಾಡಿ ಹೊರ ಹಾಕಿದ್ದರು. ಮಕ್ಕಳಿಗೆ ಸುದ್ದಿ ತಿಳಿಯುವುದಕ್ಕಿಂತ ಮೊದಲೇ ವಾಸಪ್ಪ ಕುಲಕರ್ಣಿ ಊರು ಬಿಟ್ಟು ಪರಾರಿಯಾಗಿದ್ದ. ಸ್ವಂತ ಅಣ್ಣನ ಮಗಳ ಮಾನ ಹರಾಜಾಗುತ್ತದೆ ಎಂದು ಲೆಕ್ಕಿಸದೆ ವಾಸಪ್ಪನ ಪ್ರಕರಣವನ್ನು ಇಡೀ ಊರಿನ ತುಂಬಾ ಹರಡುವಂತೆ ಮಲಕಾಣಿ ನೋಡಿಕೊಂಡಿದ್ದ. ಕಲಬುರಗಿ ಸಮೀಪದ ಯಾತ್ರಾಸ್ಥಳದಲ್ಲಿ ತಲೆಮರೆಸಿಕೊಂಡಿದ್ದ ವಾಸಪ್ಪನಿಗೆ ಊರಿನ ವಿದ್ಯಮಾನಗಳು ತಿಳಿಯುವ ವ್ಯವಸ್ಥೆ ಮಾಡಿ, ಊರಿಗೆ ಕಾಲಿಟ್ಟರೆ ಅಲ್ಲಿ ಶಿವಪ್ಪ ತನ್ನ ಪ್ರಾಣ ತೆಗೆಯುವುದು ನಿಶ್ಚಿತ ಎನ್ನುವ ಭಯ ಅವನಲ್ಲಿ ಹುಟ್ಟಿಸಿದ್ದ. ಊರಜನ ಮರೆತು ಇಡೀ ಪ್ರಕರಣ ತಣ್ಣಗಾದ ಮೇಲೆ ವಾಸಪ್ಪನನ್ನು ಸಂಪರ್ಕಿಸಿ ಊರಿಗೆ ಕರೆತರಲು ಐದು ಲಕ್ಷ ರೂಪಾಯಿಗಳ ಬೇಡಿಕೆ ಇಟ್ಟಿದ್ದ. ಊರನ್ನು ಯಾವಾಗ ಸೇರುವೇನೋ ಎನ್ನುವ ತವಕದಲ್ಲಿದ್ದ ವಾಸಪ್ಪ ಐದು ಲಕ್ಷ ರೂಪಾಯಿಗಳನ್ನು ಮಲಕಾಣಿಗೆ ಕೊಟ್ಟು ಊರಿಗೆ ಬಂದಿದ್ದ. ವಾಸಪ್ಪನಿಂದ ಪಡೆದ ಹಣದ ವಾಸನೆ ಬೇರೆಯವರಿಗಿರಲಿ ಸ್ವತಃ ತನ್ನ ಕುಟುಂಬದವರ ಮೂಗಿಗೂ ಬಡಿಯದಂತೆ ಮಲಕಾಣಿ ಎಷ್ಟೇ ಎಚ್ಚರ ವಹಿಸಿದ್ದರೂ ಬಸವರಾಜಪ್ಪನಿಗೆ ಈ ಎಲ್ಲ ಹಕೀಕತ್ತು ಮನದಟ್ಟಾಗಿತ್ತು. ಶಿವಣ್ಣನಿಗೆ ವಿಷಯ ತಿಳಿಸಿ ಮಲಕಾಣಿ ಬಗ್ಗೆ ಎಚ್ಚರದಿಂದಿರುವಂತೆ ಹೇಳಿದ್ದ. ವಾಸಪ್ಪನ ಪ್ರಕರಣದ ನಂತರ ಶಿವಣ್ಣ ತನ್ನ ತಮ್ಮ ಮಲಕಾಣಿಯನ್ನು ದೂರವೇ ಇಟ್ಟಿದ್ದ. ಇದು ಮಲಕಾಣಿಗೆ ಬಸವರಾಜಪ್ಪನ ಮೇಲೆ ಕೋಪಗೊಳ್ಳಲು ಕಾರಣವಾಗಿತ್ತು.

ಧೀರೇಂದ್ರ ಗೌಡ ಮತ್ತು ಮಲಕಾಣಿ ತಮಗಾದ ಅಪಮಾನಕ್ಕಾಗಿ ಬಸವರಾಜಪ್ಪನ ಮೇಲೆ ಹಗೆ ತೀರಿಸಿಕೊಳ್ಳಲು ಹೊಂಚು ಹಾಕುತ್ತಿದ್ದರು. ಕತ್ತಲಲ್ಲಿ ತಡಕಾಡುವವನಿಗೆ ಮಿಣುಕುದೀಪ ಎದುರಾದಂತೆ ಕಲಬುರಗಿಗೆ ಸಂಪರ್ಕ ಕಲ್ಪಿಸುವ ರಸ್ತೆಗೆ ಹೊಂದಿಕೊಂಡಿದ್ದ ಬಸವರಾಜಪ್ಪನ ಜಮೀನು ಕಣ್ಣಿಗೆ ಬಿದ್ದದ್ದೇ ಇಬ್ಬರೂ ಕಾರ್ಯ ಪ್ರವೃತ್ತರಾದರು. ತಲೆಯ ಮೇಲೊಂದು ಸೂರಿಲ್ಲದೆ ಬಿಸಿಲಲ್ಲಿ ನಿಂತಿದ್ದ ಊರ ದೇವರಾದ ಮಲಕಣ್ಣಪ್ಪನಿಗೆ ನೆರಳಿನಾಶ್ರಯ ನೀಡದಿದ್ದರೆ ಊರಿಗೆ ಕೆಟ್ಟದಾಗುತ್ತದೆಂದು ಸುದ್ದಿ ಹಬ್ಬಿಸಿದರು. ಗುಡಿಕಟ್ಟಲು ಬಸವರಾಜಪ್ಪನಿಗೆ ಎರಡೆಕರೆ ಜಮೀನಿನ ದಾನಪತ್ರ ಬರೆದುಕೊಡುವಂತೆ ಕಾಡತೊಡಗಿದರು. ಶಾಲೆಯ ಹಿಂದೆ ಸರ್ಕಾರದ ಲೆಕ್ಕದಲ್ಲಿದ್ದ ಬರಡು ಭೂಮಿ ಇದ್ದರೂ ಅದು ದೂರಾಗುತ್ತದೆಂದು ಬಸವರಾಜಪ್ಪನ ಜಮೀನು ದೇವಸ್ಥಾನ ನಿರ್ಮಾಣಕ್ಕೆ ಪ್ರಶಸ್ತವಾಗಿದೆ ಎಂದು ಪಂಚಾಯಿತಿ ಮೀಟಿಂಗ್‌ನಲ್ಲಿ ಊರ ಜನರ ಮನವೊಲಿಸಿ ದಾನಪತ್ರ ಬರೆದುಕೊಡುವಂತೆ ಒತ್ತಡ ತಂದಿದ್ದರು. ಊರಿನವನೇ ಆಗಿದ್ದ ಗಾಳಿ ಸಂಗಣ್ಣನಿಗೆ ಹೇಳಿ ಅವನ 'ಸುಂಟರಗಾಳಿ' ಪತ್ರಿಕೆಯಲ್ಲಿ ದೇವಸ್ಥಾನದ ಸ್ಥಾಪನೆಯಿಂದ ಊರಿನ ಅಭಿವೃದ್ಧಿಯಾಗುತ್ತದೆಂದು ಪುಟಗಟ್ಟಲೇ ವರದಿ ಪ್ರಕಟವಾಗುವಂತೆ ವ್ಯವಸ್ಥೆ ಮಾಡಿದ್ದರು.

* * *

ಗಾಳಿ ಸಂಗಣ್ಣನಿಗೂ ಬಸವರಾಜಪ್ಪನ ಮೇಲೆ ಹಳೆಯ ಸೇಡೊಂದು ಬಾಕಿಯಿತ್ತು. ಹಿಂದೊಮ್ಮೆ ಧೀರೇಂದ್ರ ಗೌಡನ ಮಗನ ಪ್ರಕರಣದಲ್ಲಿ ಬಸವರಾಜಪ್ಪನಿಂದ ಅವಮಾನಿತನಾದದ್ದು ಅವನು ಮರೆತಿರಲಿಲ್ಲ. ಮೂಲಿಮನಿ ಗುರುಲಿಂಗನ ನಾಲ್ಕು